ಗಣಕ ಯಂತ್ರ ಪೂರೈಕೆ

1421(1941); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿರುವ ಎಲ್ಲಾ ಪ್ರೌಢ ಶಾಲೆಗಳಿಗೆ ಗಣಕಯಂತ್ರಗಳನ್ನು ಪೂರೈಸುವ ಹಾಗೂ ಶಿಕ್ಷಕರನ್ನು ನೇಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ.

ಆ) ಎಷ್ಟು ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ಹಾಗೂ ಶಿಕ್ಷಕರನ್ನು ಒದಗಿಸಲಾಗಿದೆ; ಸಂಪೂರ್ಣ ವಿವರ ನೀಡುವುದು;

ಇ) ಉಳಿದಿರುವ ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ಹಾಗೂ ಶಿಕ್ಷಕರನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇದೆ

ಆ) ಇದುವರೆಗೆ ಒಟ್ಟು 37 ಸರ್ಕಾರಿ ಪ್ರೌಢ ಶಾಲೆಗಳು ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿ 117 ಗಣಕಯಂತ್ರಗಳನ್ನು ಐ.ಸಿ.ಟಿ ಯೋಜನೆಯಡಿ ಒದಗಿಸಿದ್ದು ಪ್ರತಿ ಶಾಲೆಗೆ ಒಬ್ಬ ಶಿಕ್ಷಕರನ್ನು ಒದಗಿಸಲು ಅವಕಾಶ ಕಲ್ಪಿಸಿದ್ದು, ಗಣಕಯಂತ್ರಗಳು ಹಾಗೂ ಶಿಕ್ಷಕರನ್ನು ನೀಡುವ ಜವಾಬ್ದಾರಿ ನಿರ್ವಹಣಾ ಸಂಸ್ಥೆಗೆ ಸೂಚಿಸಲಾಗಿದೆ. ವಿವರ ಇಂತಿದೆ;

ಬಾಲ್ಕಿ ತಾಲ್ಲೂಕು	ಪ್ರೌಢ ಶಾಲೆಗಳು	ಗಣಕಯಂತ್ರಗಳು
ಐಸಿಟಿ 1	3	27
ಐಸಿಟಿ 2	9	90
ಐಸಿಟಿ 3	25	ಸರಬರಾಜು ಮಾಡಲಾಗುವುದು

ಇ) ಉಳಿದಿರುವ ಪ್ರೌಢಶಾಲೆಗಳಲ್ಲಿ ಆದ್ಯತೆ ಮೇರೆಗೆ ಕಂಪ್ಯೂಟರ್ ಮತ್ತು ಶಿಕ್ಷಕರನ್ನು ನೀಡಲಾಗುವುದು.